ಮೈ ಸೂ ರು ವಿ ಧಾ ನ ಸ ಭ

MYSORE LEGISLATIVE ASSEMBLY

Friday, 11th May, 1973/Vaishakha 21, 1895 S.E.

The House met in the Assembly Chamber, Vidhana Soudha, at One of the Clock.

MADAM SPEAKER (SMT. K. S. NAGARATHNAMMA) in the Chair.

STARRED QUESTIONS

(to which oral Answers were given)

Mysore Minerva Mills and Processing Factory

154. Sri K. SRIRAMULU (Gandhinagar).—

Will the Minister for Industries be pleased to state :—

(*a*) whether a letter has been received from the Mysore Textile Workers' Federation to the effect that the loss is being incurred to the Mill and its workers in different ways due to the sale of cloth produced in the Minerva Mills at the rates lower than the cost price after taking over the managements of the Mysore Minerva Mills and processing Factory by Central Government ;

(*b*) the action taken by the Government on this behalf ?

Sri S. M. KRISHNA (Minister for Industries).—

(*a*) No.

(*b*) The question does not arise.

ಶ್ರೀ ಕೆ. ಶ್ರೀರಾಮುಲು.—ಸ್ವಾಮಿ ನನ್ನ ಪ್ರಶ್ನೆಗೆ ಕೊಟ್ಟಿರತಕ್ಕ ಉತ್ತರದಲ್ಲಿ ಪತ್ರ ಬರೆದಿಲ್ಲ ಎಂದು ಹೇಳಿದ್ದೀರಿ, 26—9—1972 ರಲ್ಲಿ ಒಂದು ಪತ್ರ, 9—10—1972 ರಲ್ಲಿ ಒಂದು ಪತ್ರವನ್ನು ನಾನು ತಮಗೆ ಬರೆದಿದ್ದೇನೆ. ತಾವು 10—11—1972 ರಲ್ಲಿ ತಮ್ಮ ಚೇಂಬರಿಗೆ ಬರಬೇಕು ಎಂದು ಪತ್ರವನ್ನು ಕಳುಹಿಸಿದ್ದೀರಿ, ಆ ದಿವಸ ಮುಖ್ಯಮಂತ್ರಿಗಳ ಹತ್ತಿರ ಎಂ. ಪಿ. ಗಳ ನಭೆ ಇದ್ದುದರಿಂದ ತಾವು ನನ್ನನ್ನು ತಮ್ಮ ಚೇಂಬರಿಗೆ ಕರೆದದ್ದನ್ನು ಮಹಾ ಮಾಡಲಿಲ್ಲವೇ ?

† ಶ್ರೀ ಎಸ್. ಎಂ. ಕೃಷ್ಣ.—ವರ್ಕರ್ಸ್ ಫೆಡರೇಶನ್ ಪರವಾಗಿ ಈ ಕಾರ್ಖಾನೆಗೆ ಒಂದು ಪತ್ರಬಂದಿತ್ತೋ ಅಥವಾ ಬರಲಿಲ್ಲವೋ ಎನ್ನುವ ಪ್ರಶ್ನೆ ಪ್ರಾಮುಖ್ಯವಾಗಿತ್ತು. ಮತ್ತು ಮೈಸೂರು

† Indicates that the remarks or speeches have not been revised by the member concerned.

(ಶ್ರೀ ಎಸ್. ಎಂ. ಕೃಷ್ಣ)

ಮಿಲ್ಲು, ಮಿನರ್ವಾ ಮಿಲ್ಲುಗಳಲ್ಲಿ ತಯಾರಾಗತಕ್ಕ ಬಟ್ಟೆಯನ್ನು ಉತ್ಪನ್ನಬೆಲೆಗೂ ಕಡಿಮೆ ದರದಲ್ಲಿ ಮಾರಾಟ ಮಾಡಿರುವುದರಿಂದ ಆ ಕಾರ್ಖಾನೆಗೆ ನಷ್ಟವಾಗಿದೆ ಎಂದು ಕೇಳಿದ್ದಾರೆ. ಅಲ್ಲಿ ಕಾಸ್ಟ್ ಆಫ್ ಪ್ರೊಡಕ್ಷನ್ನಿಗಿಂತ ಕಡಿಮೆ ದರದಲ್ಲಿ ಬಟ್ಟೆಯನ್ನು ವಿತರಣೆ ಮಾಡಿಲ್ಲ.

ಶ್ರೀ ಕೆ. ಶ್ರೀರಾಮುಲು.—ಈಗ ತಾವು ಮಾರಿಲ್ಲ ಎಂದು ಹೇಳಿದಿರಿ, ನಾನು ತಮಗೆ ಹೇಳುತ್ತೇನೆ, ಟರ್ಕಿ ಟವರ್ ನಂಬರ್, 3290 ಇದರ ಕಾಸ್ಟ್ ಆಫ್ ಪ್ರೊಡಕ್ಷನ್ 3 ರೂಪಾಯಿ 82 ಪೈಸಾ. ಆದರೆ ಇದನ್ನು ಮಾರಿರುವುದು ಒಂದು ರೂಪಾಯಿ 64 ಪೈಸಾ. ಇನ್ನೊಂದು ಟರ್ಕಿಟವರ್ ನಂಬರ್ 6268, ಇದರ ಕಾಸ್ಟ್ ಆಫ್ ಪ್ರೊಡಕ್ಷನ್ 2 ರೂಪಾಯಿ 20 ಪೈಸಾ ಅದನ್ನು ಮಾರಿರುವುದು 80 ಪೈಸಾ. ಈ ವಿಷಯವನ್ನು ತಿಳಿಸಿದಂತಹ ಕಮರ್ ಕುಮಾರ್ ಎನ್ನುವ ಅಧಿಕಾರಿಯನ್ನು ಗುಲ್ಬರ್ಗಾಕ್ಕೆ ವರ್ಗಮಾಡಿಲ್ಲವೇ ?

ಶ್ರೀ ಎಸ್. ಎಂ. ಕೃಷ್ಣ.—ಮಾನ್ಯ ಸದಸ್ಯರು ಈಗ ವಿಷಯವನ್ನು ಹೇಳುತ್ತಿದ್ದಾರೆ. ಅದನ್ನು ನಾನು ತನಿಖೆ ಮಾಡುತ್ತೇನೆ.

ಶ್ರೀ ಕೆ. ಶ್ರೀರಾಮುಲು.—ನಿಜಾಂಶವನ್ನು ಹೇಳತಕ್ಕಂಥಾ ಅಧಿಕಾರಿಯನ್ನು ಬೇರೆ ಕಡೆಗೆ ವರ್ಗಾ ಮಾಡುವುದರಿಂದ ಸರ್ಕಾರಕ್ಕೆ ಸಹಾಯವಾಗುತ್ತದೆಯೇ ?

ಶ್ರೀ ಎಸ್. ಎಂ. ಕೃಷ್ಣ.—ಯಾವ ಅಧಿಕಾರಿಯಿಂದ ಯಾವ ಫ್ಯಾಕ್ಟರಿಯಲ್ಲಿ ಹೆಚ್ಚು ಅನುಕೂಲವಾಗುತ್ತದೆ, ರಾಭದಾಯಕವಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ ಅಂಥಾ ಅಧಿಕಾರಿಯನ್ನು ಇಟ್ಟುಕೊಳ್ಳಬೇಕಾಗಿರತಕ್ಕದ್ದು ಸರ್ಕಾರದ ಜವಾಬ್ದಾರಿ. ಈ ಕಾರ್ಖಾನೆಗಳು ಏನಿವೆ ಇವುಗಳೆಲ್ಲವೂ ಕೂಡ ನ್ಯಾಷನಲ್ ಜೆಕ್ಸ್‌ಟೈಲ್ಸ್ ಕಾರ್ಪೊರೇಷನ್ನಿನ ಅಧೀನದಲ್ಲಿ ನಡೆಯುತ್ತಿವೆ. ಈ ಕಾರ್ಖಾನೆಗಳು ಒಂದಲ್ಲಒಂದು ಕಾರಣಕ್ಕೋಸ್ಕರ ಬಹಳ ಕಾಲ ಮುಚ್ಚಿಹೋಗಿದ್ದುವು. ಈ ಸಿಕ್‌ಯೂನಿಟ್‌ಗಳನ್ನು ನ್ಯಾಷನಲ್ ಟೆಕ್ಸ್‌ಟೈಲ್ಸ್ ಕಾರ್ಪೊರೇಷನ್ನಿನವರು ಇಟ್ಟುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಈ ಸಿಕ್ ಮಿಲ್‌ಗಳನ್ನು ಮಹಾರಾಷ್ಟ್ರ, ಗುಜರಾತ್, ಮತ್ತು ಯು. ಪಿ. ಯಲ್ಲಿ ಮಾಡಿರುವಂತೆ ನಮ್ಮ ರಾಜ್ಯದಲ್ಲಿ ಸ್ಟೇಟ್ ಜೆಕ್ಸ್‌ಟೈಲ್ಸ್ ಕಾರ್ಪೊರೇಷನ್ ಮಾಡಿ ಆ ನಾಲ್ಕು ಸಿಕ್ ಯೂನಿಟ್‌ಗಳನ್ನೂ ಇದಕ್ಕೆ ವರ್ಗಾವಣೆ ಮಾಡಿಕೊಂಡು ಈ ಕಾರ್ಖಾನೆಗಳನ್ನು ವ್ಯವಸ್ಥಿತವಾಗಿ ನಡೆಸಿಕೊಂಡು ಹೋಗುವುದಕ್ಕೆ ಸಾಧ್ಯವಾಗುತ್ತದೆ ಎಂದು ಸರ್ಕಾರದವರು ಯೋಜನೆ ಮಾಡುತ್ತಿದ್ದಾರೆ.

ಶ್ರೀ ಕೆ. ಶ್ರೀರಾಮುಲು.—ಈ ಕಾರ್ಖಾನೆಗಳಲ್ಲಿ ಲುಕ್ಸಾನಾಗುವುದಕ್ಕೆ ಯಾವ ಯಾವ ಅಧಿಕಾರಿಗಳು ಕಾರಣರಾಗಿದ್ದಾರೆಯೋ ಅವರನ್ನು ಬೇರೆ ಕಡೆಗೆ ವರ್ಗ ಮಾಡಿ ಅಲ್ಲಿಗೆ ಹೊಸದಾಗಿ ಒಳ್ಳೆಯ ಅಧಿಕಾರಿಗಳನ್ನು ಹಾಕುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ.—ಈಗ ಇರತಕ್ಕ ಅಧಿಕಾರಿಗಳನ್ನು ತೆಗೆದುಹಾಕುವುದಕ್ಕೆ ಅವರು ಮಿಸ್ ಬಿಹೇವ್ ಮಾಡಿದ್ದರೆ, ಇನ್‌ಎಫಿಷಿಯೆಂಟ್ ಆಗಿದ್ದರೆ, ಇನ್‌ಕಾಂಪಿಟೆಂಟ್ ಆಗಿದ್ದರೆ ಸರ್ವೀಸ್‌ನಿಂದ ತೆಗೆದುಹಾಕಬಹುದು. ಒಬ್ಬ ಕೆಟ್ಟ ಅಧಿಕಾರಿ, ಎಲ್ಲಿದ್ದರೇನು, ಗುಲ್ಬರ್ಗಾದಲ್ಲಿದ್ದರೇನು, ರಾಯಚೂರಿನಲ್ಲಿದ್ದರೇನು, ಅವನು ಎಲ್ಲಿದ್ದರೂ ಸಮಸ್ಯೆ ಪರಿಹಾರವಾಗುವುದಿಲ್ಲ. ಈಗ ನಮ್ಮ ರಾಜ್ಯದಲ್ಲಿ ಒಂದು ಸ್ಟೇಟ್ ಜೆಕ್ಸ್‌ಟೈಲ್ಸ್ ಕಾರ್ಪೊರೇಷನ್ ಮಾಡಿ ಆ ನಾಲ್ಕು ಕಾರ್ಖಾನೆಗಳನ್ನೂ ಇದಕ್ಕೆ ವರ್ಗಾವಣೆ ಮಾಡಿಕೊಂಡು ಈ ಕಾರ್ಖಾನೆಗಳನ್ನು ನಡೆಸಿಕೊಂಡು ಹೋಗಬೇಕೆಂದಿದ್ದೇವೆ.

Construction of Samandur Village Tank

656. Sri M. B. RAMASWAMY (Anekal).—

Will the Minister for Public Works and Electricity be pleased to state :—

(*a*) whether it is fact that the plans and estimates have been prepared in respect of Samandur village tank, Anekal taluk ;